# ಅದರ ಪಾಡಿಗೆ ಬಿಡಬೇಕಿತ್ತು



ನೆನೆಹಾಕಿ ಮೊಳಕೆ ಬರಿಸಿ
ಬಿತ್ತಿದರೆ ಬೇಗ ಬೆಳೆಯುತ್ತೆ.
ಅಮ್ಮ ಹೇಳಿದ್ದು ಖರೆ ಹೌದಲ್ಲ!

ಗೊಬ್ಬರದ ಮಣ್ಣಿನಲ್ಲಿ ಹೂತಿಟ್ಟ ಅವರೆ ಬೀಜ
ಇರುವೆ ಹರಿಯುವ ಮೊದಲೇ ರೆಕ್ಕೆ ಅಗಲಿಸಿ
ಸರಿ ಎರಡೇ ದಿನಕ್ಕೆ ಕತ್ತು ಚಾಚಿ
ಆಕಾಶವನ್ನೇ ದಿಟ್ಟಿಸಿದ್ದಕ್ಕೆ
ಎಳೆ ಬಳ್ಳಿಗೆ ಆಧಾರಕ್ಕಿರಲೆಂದು
ಖಬರು ಕೋಲು ಊರಿದ್ದೆ.

ಕೋಲು ತುದಿಯನ್ನು ಏರಿ ನೆಗೆದ
ಅದರ ಆತುರಕ್ಕೆ ಗಡಿಬಿಡಿಯಲ್ಲಿ
ಚಪ್ಪರ ಹಾಕಿಸಿದ್ದೆ.
ಚಪ್ಪರದ ತುಂಬಾ ಒಪ್ಪವಾಗಿ ಹರಡಿ
ಬಳ್ಳಿ ತುಂಬಾ ಭರಪೂರ ಜೋಲಾಡುವ
ಜಾಲರಿ ಅವರೆ ಬಾಳೇ ಬಾಳು.

ಬಳ್ಳಿ ಸೊರಗುವ ಹೊತ್ತಿಗೆ
ಹತ್ತಿರದ ನೆಂಟರಿಗೆ, ನೆರೆಹೊರೆಯವರಿಗೆ
ಒಂದಿಷ್ಟು ಹಂಚಿದ್ದು ಬಿಟ್ಟರೆ
ಉಳಿದದ್ದು ಪೂರ ಮಳೆಗಾಲಕ್ಕೆ.

ಈಗ ಮುರಿದುಬಿದ್ದ ಚಪ್ಪರದ ಒಣ ಕೋಲು
ಒಲೆ ಉರಿಗೆ ಒಟ್ಟುಗೂಡಿಸುವಾಗ
ಒಳಗೊಂದು ಒದ್ದು ಬರುವ ಸಂಕಟ.



ಮುಗಿಲಿಗೆ ನೆಟ್ಟಿತ್ತಲ್ಲ ಅದರ ಕಣ್ಣು?
ಮುಗಿಲ ಚಪ್ಪರದ ಮೇಲೆ ಅವರೆ ಬಾಳು
ಜಗದಗಲ ತೂಗಿ ಎಷ್ಟು ಜನರ ಊಟಕ್ಕೆ,
ನಾಳೆಯ ಬೀಜಕ್ಕೆ...
ಹೀಗೊಂದು ನೆನಕೆ.

ಈ ಸಲ ಬಿತ್ತಿದರೆ
ಹಾಗೆಯೇ ನೆಗೆಯಲು ಬಿಡಬೇಕು
ಆಕಾಶವನ್ನು ನೆಟ್ಟಿಕೊಳ್ಳುತ್ತದೋ?
ನೆಲವನ್ನೇ ಅಪ್ಪಿಕೊಳ್ಳುತ್ತದೋ?
ಆಯ್ಕೆ ಅದಕ್ಕೆ ಬಿಡಬೇಕು.
ನೀರು, ಗೊಬ್ಬರ ಉಳಿಸುವುದಷ್ಟೇ
ನನ್ನ ಪಾಲಿಗೆ ಸಾಕು.

● **ಸ್ಮಿತಾ ಅಮೃತರಾಜ್**

ಕಲೆ: ವಾಗೀಶ ಹೆಗಡೆ